ಶ್ರೀ ಪ್ರಸನ್ನ

ಸತ್ಯಧರ್ಮತೀರ್ಥರ ಚರಿತ್ರೆ

(ಶ್ರೀ ಪ್ರಸನ್ನ ಶ್ರೀನಿವಾಸದಾಸಾರ್ಯ ವಿರಚಿತ)

—: ಸಂಪಾದಕರು, --

ಎಂ. ಎಚ್. ಆಚಾರ್

ಶ್ರೀ

॥ ಶ್ರೀ ಲಕ್ಷ್ಮೀಪದ್ಮಾವತೀ ಸಮೇತ
ಶ್ರೀ ಪ್ರಸನ್ನ ಶ್ರೀನಿವಾಸಾಯ ನಮಃ ॥

ಶ್ರೀ ಪ್ರಸನ್ನ ಸತ್ಯಧರ್ಮತೀರ್ಥರ ಚರಿತ್ರೆ

(ಶ್ರೀ ಪ್ರಸನ್ನ ಶ್ರೀನಿವಾಸದಾಸಾರ್ಯ ವಿರಚಿತ)

ಶ್ರೀ ಸತ್ಯಧರ್ಮ ತೀರ್ಥರ ಪಾದಯುಗ್ಮದಲಿ
ನಾ ಶರಣು ಎನ್ನ ಪಾಲಿಪರು ಎಡಬಿಡದೆ
ಅಸಮ ಅನುಪಮ ಸರ್ವಗುಣ ಗುಣಾರ್ಣವ ಅನಘ
ಬಿಸಜಜಾಂಡದ ಒಡೆಯ ಶ್ರೀಶನಿಗೆ ಪ್ರಿಯರು । ಪ ।

ಹಂಸನಾಮಕ ವಿಷ್ಣು ವನರುಹಾಸನ ಸನಕ
ದೂರ್ವಾಸ ಮೊದಲಾದ ಗುರುವಂಶಜಾತ
ದಶಪ್ರಮತಿ ಸರಸಿಜನಾಭ ನರಹರಿ ತೀರ್ಥ
ಬಿಸಜ ಚರಣಂಗಳಲಿ ಸತತ ನಾ ಶರಣು । ೧ ॥

ಮಾಧವ ಅಕ್ಷೋಭ್ಯ ಜಯ ವಿದ್ಯಾಧಿರಾಜ
ರಾಜೇಂದ್ರ, ಕವೀಂದ್ರ, ವಾಗೀಶ ರಾಮಚಂದ್ರ
ವಿಭುದೇಂದ್ರ, ವಿದ್ಯಾನಿಧಿಗಳು ಈ ಸರ್ವ
ಸುತಪೋನಿಧಿ ಯತಿವರ್ಯರಿಗೆ ನಮಿಪೆ । ೨ ।

ವೇದಾಂತ ಕೋವಿದರು ರಘುನಾಥ ರಘುವರ್ಯ
ಪದವಾಕ್ಯ ತತ್ವಜ್ಞ ರಘೂತ್ತಮಾರ್ಯರಿಗೆ
ವೇದವ್ಯಾಸಾಭಿದ ಗುರು ವಿದ್ಯಾಧೀಶರಿಗೆ
ವೇದನಿಧಿಗಳಿಗೆ ನಾ ಬಾಗುವೆ ಶಿರವ ॥ ೩ ।

ಸತ್ಯವ್ರತ ಸತ್ಯನಿಧಿ ಸತ್ಯನಾಥರಿಗೆ
ಸತ್ಯಾಭಿನವ ಸತ್ಯಪೂರ್ಣರಿಗೆ ನಮಿಪೆ
ಸತ್ಯವಿಜಯರಿಗೆ ಸತ್ಯಪ್ರಿಯ ಸತ್ಯಬೋಧರಿಗೆ
ಸತ್ಯಸಂಧರಿಗೆ ನಾ ಶರಣಾವೆ ಎಂದೂ । ೪ ॥

ಸತ್ಯವರತೀರ್ಥರಿಗೆ ಸತ್ಯವರ ಕರಜಾತ
ಸತ್ಯಧರ್ಮರಿಗೆ ನಾ ಮನಸ ಆ ನಮಿಪೆ
ಸತ್ಯಧರ್ಮರ ಮಹಿಮೆ ಬಹುಬಹು ಬಹುಳವು
ಕಿಂಚಿತ್ತು ಅಂಶಮಾತ್ರ ಸೂಚಿತವು ಇಲ್ಲಿ ॥ ೫ ।

ಉದ್ದಾಮ ಪಂಡಿತರು ನವರತ್ನವಂಶಜರು
ವಿದ್ವತ್ ಶಿರೋಮಣಿ ಅಣ್ಣ ಆಚಾರ್ಯರು
ವೈದಿಕ ಸದಾಚಾರಿ ತ್ರಿಕರಣದಿ ಶುದ್ಧರು
ನಂದಿನಿಧರ ಮಧ್ವಮಾಧವ ಪ್ರಿಯರು ॥ ೬ ॥

ವಿತ್ತಸಂಗ್ರಹದಲ್ಲಿ ಚಿತ್ತವನು ಇಡದಲೆ
ಸತ್ಯಧರ್ಮಾದಿರತರು ಸಂತತ ಇವರು
ಸದಾಗಮಿಕ ಭಾಗವತ ಮಾಧ್ವ ಸಚ್ಛಾಸ್ತ್ರದಿ
ಮುದದಿಂದ ಕಾಲ ಉಪಯೋಗ ಮಾಡುವರು ॥ ೭ ॥

ಇಂಥಾ ಭಾಗವತರಲ್ಲಿ ಗಂಗಾಧರನೇವೇ
ಬಂದು ಔತಣ ಉಂಡು ಉಡುಗರೆಯಕೊಂಡು
ಸಂತತ ತಾಧ್ಯಾನಿಸುವ ರಾಮನ್ನ ಇವರು
ಮುಂದು ಪೂಜಿಪ ಯೋಗ ಅನುಗ್ರಹ ಮಾಡಿದರು ॥ ೮ ॥

ಅಣ್ಣಾಚಾರ್ಯರ ಮನೆಯಲ್ಲಿ ಅಕ್ಕಿ
ಉಣಲಿಕ್ಕೆ ಸಾಲದೆ ಇರುವಾಗ ಬಂದ
ಬ್ರಾಹ್ಮಣ ಓರ್ವನು ಭಸ್ಮಧರ ಅವನು
ಅನ್ನಬೇಕೆಂದನು ಮಧ್ಯಾಹ್ನಕಾಲ ॥ ೯ ॥

ಅನ್ನ ಅನ್ನದ ಅನ್ನಾದನ್ನ ಸ್ಮರಿಸುತ್ತ
ಅಣ್ಣಾಚಾರ್ಯರು ಅಡಿಗೆ ತಾ ಮಾಡಿ
ಬ್ರಾಹ್ಮಣನಿಗೆ ಬಡಿಸಿ ಧೋತ್ರಗಳ ಕೊಟ್ಟರು
ಪೂರ್ಣ ಉಂಡು ಪೋದ ವಿಪ್ರನು ತುಷ್ಟಿಯಲಿ ॥ ೧೦ ।

ಹಿಂದೆ ಆಚಾರ್ಯರು ಪೋಗಿ ನೋಡಲು ಶಿವನ
ಮಂದಿರದಿ ವಿಪ್ರ ಅಂತರ್ಧಾನವಾದ
ಮಂದಾಕಿನಿಧರನ ಮೂರ್ತಿಯಲಿ ಧೋತ್ರಗಳು
ಚಂದದಿ ಇದ್ದವು ದಕ್ಷಿಣೆ ಸಮೇತ । ೧೧ ॥

ಸವಣೂರು ರಾಜ್ಯದ ಮಂತ್ರಿ ಖಂಡೇರಾಯ
ದಿವಿಜರ ಲೋಕಯಾತ್ರೆಯು ಮಾಡಲಾಗ
ದೇವರ ನೈವೇದ್ಯಕ್ಕಾದರಣೆ ತಪ್ಪಲು
ಸವಣೂರು ಪ್ರಾಂತವ ಬಿಟ್ಟು ತೆರಳಿದರು ॥ ೧೨ ॥

ದೇವತಾಂಶರು ಇವರು ಮಾನುಷ ಜನ್ಮವ
ಭುವಿಯಲ್ಲಿಕೊಂಡು ಮಾನುಷ್ಯಜನರಂತೆ
ಭವಣೆಗಳ ಹರಿಸ್ಮರಣೆಯಿಂ ತಾಳಿ ತಪ್ಪಸ್ಸಂತೆ
ದಿವ್ಯ ಮಂತ್ರಾಲಯ ಕ್ಷೇತ್ರ ಐದಿದರು ॥ ೧೩ ॥

ಔದಾರ್ಯಗುಣನಿಧಿ ಶ್ರೀ ರಾಘವೇಂದ್ರ
ತೀರ್ಥರ ವೃಂದಾವನ ಸೇವೆ ಮಾಡಿ
ಕೃತಕೃತ್ಯರಾದರು ಅಣ್ಣಾಚಾರ್ಯರು
ಒದಗಿ ಅನುಗ್ರಹಿಸಿದರು ಗುರುಗಳು ಬೇಗ ॥ ೧೪ ॥

ಶ್ರೀ ರಾಘವೇಂದ್ರ ತೀರ್ಥಾರ್ಯಕರುಣೆಗಳು
ತೋರಿ ಸ್ವಪ್ನದಿ ಸತ್ಯವರರಲ್ಲಿ ಪೋಗೆ
ದೊರೆಯುವುದು ಇಷ್ಟಾರ್ಥ ಎಂದು ಪೇಳಿದರು
ಹೊರಟರು ಆಚಾರ್ಯರು ಸತ್ಯವರರಲ್ಲಿ ॥ ೧೫ ॥

ಆಸಮಯ ಶ್ರೀ ಸತ್ಯವರ ತೀರ್ಥರ ಮಠದಿಂ
ಶ್ರೀ ಸ್ವಾಮಿ ಮಂಜೂಶ ಕಳವು ಹೋಗಿ
ವ್ಯಸನದಲಿ ಉಪೋಶಣದಿ ಸತ್ಯವರರಿದ್ದರು
ಭಾಸವಾಗದೆ ಮೂರ್ತಿಗಳಿರುವ ಸ್ಥಳವು ॥ ೧೬ ॥

ಮಾರ್ಗದಲಿ ಅಣ್ಣಾಚಾರ್ಯರು ಮೂರ್ತಿಗಳ
ಝಗಝಗಿಪ ಕಾಂತಿಯ ತಾ ಕಂಡು ಮಠಕ್ಕೆ
ಪೋಗಿ ಶ್ರೀ ಸತ್ಯವರರಲ್ಲಿ ಪೇಳಿದರು
ಹೇಗೆ ವರ್ಣಿಸುವೆ ಆ ಗುರುಗಳ ಆನಂದ ॥ ೧೭ ॥

ನಿಗಮ ಘೋಷಂಗಳು ವಿಪ್ರಜನ ಮುಖದಿಂದ
ಮಂಗಳ ಧ್ವನಿ ಮೇಳ ತಾಳವಾದ್ಯಗಳು
ಕಂಗೊಳಿಸುವ ಮೆರವಣಿಗೆ ಮಠ ಮಂದಿರಕ್ಕೆ
ಗಂಗಾಜನಕನ ಮೂರ್ತಿಗಳ ತಂದರು ॥ ೧೮ ॥

ಯುಕ್ತಕಾಲದಿ ಅಣ್ಣಾಚಾರ್ಯಸೂರಿಗಳು
ಸತ್ಯವರರ ಅಮೃತ ಹಸ್ತಾಭಿಷೇಕ
ಯತಿ ಆಶ್ರಮ ಸತ್ಯಧರ್ಮತೀರ್ಥ
ರೆಂದು ನಾಮಾ ಪ್ರಣವ ಉಪದೇಶಕೊಂಡರು ॥ ೧೯ ॥

ಪ್ರಣವೋಪದೇಶ ಗುರು ಹಸ್ತದಿಂ ಅಭಿಷೇಕ
ಘನ ಮಹಾವೇದಾಂತ ಪೀಠವು ಲಭಿಸಿ
ಈ ನಮ್ಮ ಸತ್ಯಧರ್ಮರ ದೇಶದಿಗ್ವಿಜಯ
ಜ್ಞಾನೋಪದೇಶ ಹರಿಪೂಜಾ ಮಾಡಿದರು ॥ ೨೦ ॥

ಭಾವುಕರ ಪ್ರಿಯತಮಸಜಾತ್ಸುಜಾತೀಯವು
ಭಾವದೀಪಿಕ ಶ್ರೀಮದ್ ಭಾಗವತಕೆ
ತತ್ವಸಂಖ್ಯಾನ ಶ್ರೀ ವಿಷ್ಣು ತತ್ವ ನಿರ್ಣಯ
ಇವು ಎರಡಕ್ಕೂ ಟಿಪ್ಪಣಿ ಬರೆದು ಇಹರು ॥ ೨೧ ॥

ವಾಗ್ವಜ್ರ ಧಾರಾವು ದುರ್ವಾದಿ ಗಿರಿಕುಲಿಶ
ಜಗತಲ್ಲಿ ಹೋದಕಡೆ ಎಲ್ಲೂ ಮರ್ಯಾದೆ
ಬಾಗುವ ಯೋಗ್ಯರಿಗೆ ಸತ್ತತ್ವ ಉಪದೇಶ
ಜಗಕ್ಷೇಮಕರ ಪೂಜಾವರವು ದೀನರಿಗೆ ॥ ೨೨ ॥

ಮೂವತ್ತು ಮೇಲ್ಮೂರು ವತ್ಸರವು ಶ್ರೀಮಠ
ಸುವಿತರಣೆಯಿಂದ ಆಡಳಿತ ಮಾಡಿ
ಸುವರ್ಣ ರತ್ನಾಭರಣ ಮಠತೋಟಂಗಳ
ದೇವಪ್ರೀತ್ಯರ್ಥ ಸೇರಿಸಿದರು ಮಠಕೆ ॥ ೨೩ ॥

ಹದಿನೇಳುನೂರು ಐವತ್ತೆರಡು ಶಾಲಿಶಕ
ತ್ರಯೋದಶಿ ಶ್ರಾವಣ ಕೃಷ್ಣಪಕ್ಷ
ಇಂಥಾ ಸುಪುಣ್ಯದಿನದಲ್ಲಿ ಶ್ರೀ ಹರಿಯ
ಪಾದವನ್ನೈದಿದರು ಹರಿಯಧ್ಯಾನಿಸುತ ॥ ೨೪ ॥

ಮತ್ತೊಂದು ಅಂಶದಲಿ ವೃಂದಾವನದಲ್ಲಿ
ಬಂದು ಸೇವಿಸುವವರ ವಾಂಛಿತವೀಯುತ್ತ
ನಂದಿನಿಧರ ಮಧ್ವ ಮಾಧವನ ಒಲಿಮೆಯಿಂ
ನಿಂತಿಹರು ಸ್ಮರಿಪರ ಗೋಕಲ್ಪತರುವು ॥ ೨೫ ॥

ಕನ್ನಡಪ್ರದೇಶದಲಿ ಮಹಿಷೂರು ರಾಜ್ಯ ಹೊಳೆ
ಹೊನ್ನೂರು ಕ್ಷೇತ್ರದಲಿ ವೃಂದಾವನ
ಜಹ್ನುಕನ್ಯಾ ಬಿಂದು ರೂಪದಲಿ ವರ್ಷಿಪಳು
ಜಾಹ್ನವಿಧರ ಉಸುವು ಕಣರೂಪದೊಳಗೆ ॥ ೨೬ ॥

ಒಲಿವ ಶಿವ ಸತ್ಯಧರ್ಮರ ನಾವು ಸ್ಮರಿಸಲು
ಒಲಿವರು ಮಧ್ವಮುನಿ ಶಿವನು ನಮಗೊಲಿಯೆ
ಒಲಿವನು ಅಜಪಿತ ಶ್ರೀ ಪ್ರಸನ್ನ ಶ್ರೀನಿವಾಸನು
ಅಲವ ಬೋಧರು ಮಧ್ವಮುನಿ ಒಲಿದರೇವೇ ॥ ೨೭ ॥

॥ ಶ್ರೀ ಕೃಷ್ಣಾರ್ಪಣಮಸ್ತು ॥

ಮೊದಲನೆಯ ಮುದ್ರಣ
9/500/20-7-79/149

ಪ್ರಕಾಶಕರು
ಶ್ರೀ ಪ್ರಸನ್ನ ನೃಸಿಂಹ ಪ್ರಕಾಶನ
7/2 8ನೇ ಅಡ್ಡರಸ್ತೆ ಮಲ್ಲೇಶ್ವರ
ಬೆಂಗಳೂರು - 560 003.

ಫೋನ್ : 35352

ಎಲ್ಲಾ ಹಕ್ಕುಗಳನ್ನು ಕಾದಿರಸಲಾಗಿದೆ.